ವಿಶ್ವವಾಣಿ

ಸಂಪಾದಕೀಯ

ಅಧಿಕಾರದಾಹಿತ್ವ ಹೇಳಿಕೆ

ರಾಜ್ಯ ಸರಕಾರ ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಯಾವುದೇ ಸರಕಾರ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದರೆ ಅದರ ವ್ಯತಿರಿಕ್ತ ಪರಿಣಾಮ ಜನತೆ ಮೇಲೆ ಬೀರಲಿದೆ. ಕೋವಿಡ್-19 ಎರಡನೆ ಅಲೆಯು ವೇಗವಾಗಿ ಹರಡುತ್ತಿರುವ ಈ ವೇಳೆ ಸರಕಾರಕ್ಕೆ ಜವಾಬ್ದಾರಿ ಹೆಚ್ಚಿದೆ. ಜನತೆಯಲ್ಲೂ ಆತಂಕ ಹೆಚ್ಚುತ್ತಿದೆ. ಈ ವೇಳೆ ಜನತೆ ಜನಪ್ರತಿನಿಧಿಗಳಿಂದ ಹೆಚ್ಚಿನ ಜವಾಬ್ದಾರಿಯುತ ನಡೆಯನ್ನು ಬಯಸುತ್ತದೆ. ಆದರೆ ಕೆಲವು ಜನಪ್ರತಿನಿಧಿಗಳು ಸರಕಾರಕ್ಕೆ ಮುಜುಗರ ಉಂಟುಮಾಡುವಂಥ ರೀತಿಯಲ್ಲಿ ವರ್ತಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇತ್ತೀಚೆಗೆ ಸೀಡಿ ಪ್ರಕರಣದ ಕಾರಣದಿಂದ ಆಡಳಿತ ಪಕ್ಷ ಮುಜುಗರಕ್ಕೆ ಒಳಗಾಗಿತ್ತು. ಈ ಮುಜುಗರದಿಂದ ಹೊರಬರುವುದರೊಳಗಾಗಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನಾಯಕತ್ವ ಬದಲಾವಣೆಯ ಬಗ್ಗೆ ಪ್ರಸ್ತಾಪಿಸಿರುವುದು ಮತ್ತೊಂದು ಮುಜುಗರದ ನಡೆ. ಇಡೀ ರಾಜ್ಯ ಕೋವಿಡ್‌ನಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಚಿಂತೆಯಿಂದ ಕೂಡಿರುವಾಗ ನಾಯಕತ್ವ ಬದಲಾವಣೆಯ ಚರ್ಚೆ ಸೃಷ್ಟಿಯಾಗಿರುವುದು ಅಸಮಂಜಸ. ಆಡಳಿತ ಪಕ್ಷ ನಾಯಕರು ಇಂಥ ಸಂದರ್ಭದಲ್ಲಿ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕಿಂತ ಮುಖ್ಯವಾಗಿ ಆಂತರಿಕ ಅಸಮಾಧಾನಗಳನ್ನು ವ್ಯಕ್ತಪಡಿಸುತ್ತಿರುವುದು ಕಳವಳಕಾರಿ ಸಂಗತಿ. ಆಡಳಿತ ಪಕ್ಷವಾಗಿ ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಸ್ಥಾನಮಾನಕ್ಕಾಗಿ ಮನವಿ, ಒತ್ತಾಯ, ಪ್ರತಿಭಟಿಸುವುದು ಸಹಜ ಕ್ರಿಯೆ. ಆದರೆ ಅದಕ್ಕೆ ಸೂಕ್ತ ಸಮಯ ಮುಖ್ಯ. ಪ್ರಸ್ತುತ ರಾಜ್ಯ ಸರಕಾರ ಈಗಾಗಲೇ ಹಲವಾರು ಬಾರಿ ಸಚಿವ ಸಂಪುಟ ವಿಸ್ತರಣೆ ಮೂಲಕ ಜನತೆಯಲ್ಲಿ ಬೇಸರ ಮೂಡಿಸಿದೆ. ಇದೀಗ ಇಡೀ ರಾಜ್ಯವು ಕೋವಿಡ್ ಎರಡನೆಯ ಹರಡುವಿಕೆಯ ಪರಿಣಾಮದಿಂದ ತತ್ತರಿಸುತ್ತಿರುವಾಗ ಜನಪ್ರತಿನಿಧಿಗಳು ನಾಯಕತ್ವ ಬದಲಾವಣೆಯಂಥ ವಿಷಯಗಳನ್ನು ಬಹಿರಂಗಗೊಳಿಸಿರುವುದು ಜನರ ಸಮಸ್ಯೆಗಳಿಗಿಂತ ಅಧಿಕಾರ ದಾಹಿತ್ವವೇ ಮುಖ್ಯವಾಗಿ ಗೋಚರಿಸುತ್ತಿದೆ.

ಸೊಂಪಾದಕೀಯ

ಅಲ್ಲಿ ಮೂಗುತಿ, ಇಲ್ಲಿ ನೀರಿಗೂ ಇಲ್ಲ ಗತಿ

ನಮ್ಮಲ್ಲಿ ಕಾಯಿದೆ, ನೀತಿ ನಿಯಮ ಪಾಲನೆಗೆ ಜನರನ್ನು ಪುಸಲಾಯಿಸಬೇಕು, ಪ್ರೋತ್ಸಾಹಿಸಬೇಕು. ಇಲ್ಲದಿದ್ದರೆ ಅವು ಯಶಸ್ವಿಯಾಗುವುದು ಕಡಿಮೆ. ಈಗ ಕೋವಿಡ್ ಲಸಿಕೆಗೂ ಇದು ಲಾಗೂ ಆಗಿದೆ. ಗುಜರಾತ್‌ನ ರಾಜಕೋಟ್‌ನಲ್ಲಿ ಲಸಿಕೆ ಹಾಕಿಸಿಕೊಂಡವರಿಗೂ ಗಿಫ್ಟ್ ನೀಡುತ್ತಾರಂತೆ. ಅಲ್ಲಿನ ಒಡವೆ ವ್ಯಾಪಾರಿಗಳ ಸಂಘವು ಕರೋನಾ ಲಸಿಕೆ ಅಭಿಯಾನ ನಡೆಸಿತಂತೆ. ರಕ್ತದಾನ ಶಿಬಿರ, ನೇತ್ರ ತಪಾಸಣೆ ಶಿಬಿರ ಇತ್ಯಾದಿಗಳು ನಡೆಯುತ್ತವಲ್ಲ, ಆ ಥರದ ಕಾರ್ಯಕ್ರಮವದು. ಲಸಿಕೆಯನ್ನಂತೂ ಉಚಿತವಾಗಿ ನೀಡಲಾಯಿತು. ಅದರ ಜೊತೆಗೆ ಸರ್‌ಪ್ರೈಸ್ ಗಿಫ್ಟ್ ಕೂಡ ಇತ್ತಂತೆ. ಲಸಿಕೆ ಹಾಕಿಸಿಕೊಂಡ ಪ್ರತಿಯೊಬ್ಬ ಮಹಿಳೆಗೆ ಚಿನ್ನದ ಮೂಗುತಿ ನೀಡಲಾಯಿತಂತೆ. ಹೆಂಗಸರಿಗಷ್ಟೇನಾ ಎಂದು ಗಂಡಸರು ಮೂಗು ಮುರಿಯಬಾರದಲ್ಲ, ಅದಕ್ಕಾಗಿ ಅವರಿಗೂ ಹ್ಯಾಂಡ್ ಬ್ಲೆಂಡರ್ ಕೊಡುಗೆ ನೀಡಲಾಯಿತು. 750 ಮಹಿಳೆಯರು 600 ಪುರುಷರು ಇದರ ಫಲಾನುಭವಿಗಳಂತೆ. ಅಡ್ಡಿ ಇಲ್ಲ ಬಿಡಿ. ಮೊದಲೆಲ್ಲ ಕರೋನಾ ವಾರಿಯರ್ಸ್‌ಗಷ್ಟೇ ಲಸಿಕೆ, ಅನಂತರ 45 ಪ್ಲಸ್ ನವರಿಗಷ್ಟೇ, ಹಾಗೆ ಹೀಗೆ ಎಂಬ ಷರತ್ತು ವಿಧಿಸಲಾಗುತ್ತಿತ್ತು. ಕೊನೆ ಕೊನೆಗೆ ಇದರಿಂದ ಅಡ್ಡಪರಿಣಾಮ ಆಗುತ್ತದೆ ಎಂದು ಏನೇನೋ ಸುದ್ದಿಗಳು ಬರತೊಡಗಿದಂತೆ ನಿಮ್ಮ ಷರತ್ತೂ ಬೇಡ, ನಿಮ್ಮ ಲಸಿಕೆ ಎಂಬ ಷರಬತ್ತೂ ಬೇಡ ಎಂದು ಬಹಳಷ್ಟು ಮಂದಿ ಹಿಂದೆ ಸರಿಯತೊಡಗಿದರು. ಆದರೆ ಲಸಿಕೆ ಹಾಕಿಸಿಕೊಂಡರೆ ಈ ರೀತಿಯ 'ಪರಿಣಾಮ' ಆಗುತ್ತದೆ ಎಂದಾದರೆ ಎಲ್ಲರೂ ಮುಂದೆ ಬರಬಹುದೇನೋ. ಹಾಗೆಯೇ ಈಗಾಗಲೇ ಹಾಕಿಸಿಕೊಂಡವರಿಗೂ ಈ ಬೆನಿಫಿಟ್ ಇದೆಯಾ ಎಂದು ಕೇಳಿಕೊಂಡು ಇನ್ನೂ ಯಾರೂ ಬಂದಿಲ್ಲವೋ ಹೇಗೆಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ. ಅದೂ ಅಲ್ಲದೆ ಮತ್ತೆ ಎರಡನೇ ಡೋಸ್ ಹಾಕಿಸಿಕೊಳ್ಳಬೇಕಲ್ಲ, ಆ ಸಮಯದಲ್ಲೂ ಈ ಥರದ ಗಿಫ್ಟ್ ಇರುತ್ತಾ ಎಂಬ ಪ್ರಶ್ನೆಯನ್ನೂ ಕೇಳುತ್ತಿರಬಹುದು. ಇದೇನಾದರೂ ಸರಕಾರಿ ವ್ಯವಸ್ಥೆ ಆಗಿದ್ದಿದ್ದರೆ ಇಷ್ಟೊತ್ತಿಗಾಗಲೇ ನಕಲಿ ಫಲಾನುಭವಿಗಳು ಸೃಷ್ಟಿಯಾಗಿ ಬಿಡುತ್ತಿದ್ದರೋ ಏನೋ. ಆಗ ಮೂಗಿಗಿಂತ ಮೂಗುತಿ ಭಾರ ಎಂಬಂತೆ, ಉತ್ಪಾದನೆಯಾದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಹಾಕಿದ ದಾಖಲೆ ಇರುತ್ತಿತ್ತೇನೋ. ಅಂದರೆ ಗುರಿಮೀರಿದ ಸಾಧನೆ. ಅದೆಲ್ಲ ಸರಿ. ಗುಜರಾತಿನಲ್ಲೇನೊ ಚಿನ್ನ, ವಜ್ರದ ವ್ಯಾಪಾರಿಗಳು ಹೇರಳವಾಗಿದ್ದಾರೆ. ಮೂಗುತಿಯನ್ನೂ ಕೊಡಬಹುದು, ಕಾಸಿನ ಸರವನ್ನೂ ಕೊಡಬಹುದು. ಆದರೆ ನಮಗೆ ಏನು ಸಿಗುತ್ತದೆ? ಎಂದು ಉಳಿದ ರಾಜ್ಯಗಳವರು ಕರುಬಬಹುದು. ಇಲ್ಲಿ ಲಸಿಕೆ ಹಾಕಿದ ಮೇಲೆ ನೀರಿಗೂ ಗತಿ ಇರಲ್ಲ, ಮೂಗುತಿ ಎಲ್ಲಿಂದ ಬರಬೇಕು, ಎಲ್ಲ ನಮ್ಮ ಹಣೆಬರಹ ಎಂದುಕೊಳ್ಳುತ್ತಿರಬಹುದು. ಜನರ ಈ ಅಳಲನ್ನು ರಾಜಕಾರಣಿಗಳು, ಸಮಾಜಸೇವಕರು ಆಲಿಸಿ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಂಡರೆ, ಜನರು ಲಸಿಕೆಯ ಜತೆ ಗಿಫ್ಟ್ ಪಡೆದು ಅವರಿಗೆ ಹಾರೈಕೆ ಕೊಡಬಹುದು.

COVID-19
VACCINE

ಸಂಪಾದಕರ ಸದ್ಯಶೋಧನೆ

ಒಂದು ಅಪರೂಪದ ರಸ್ತೆ ಕುರಿತು

ಕೆಲವು ವರ್ಷಗಳ ಹಿಂದೆ, ನಾನು ದಕ್ಷಿಣ ಆಫ್ರಿಕಾಕ್ಕೆ ಹೋದಾಗ, ರಾಜಧಾನಿ ಜೋಹಾನ್ಸ್ ಬರ್ಗ್‌ಗೆ ಸನಿಹದಲ್ಲಿರುವ ಸೊವೆಟೋ ನಗರಕ್ಕೆಹೋಗಿದ್ದೆ. ಈ ನಗರದ ವೈಶಿಷ್ಟ್ಯವೇನೆಂದರೆ, ಅಲ್ಲಿನ ಒಂದೇ ರಸ್ತೆಯಲ್ಲಿ ಇಬ್ಬರು ನೊಬೆಲ್ ಪ್ರಶಸ್ತಿ ಪುರಸ್ಕೃತರು ವಾಸವಿದ್ದುದು. ಸಾಮಾನ್ಯವಾಗಿ ಯಾವುದಾದರೂ ಒಂದು ನಗರದಲ್ಲಿ ಒಬ್ಬ ನೊಬೆಲ್ ಪ್ರಶಸ್ತಿ ಪುರಸ್ಕೃತರು ವಾಸಿಸಿದರೆ, ಆ ನಗರದ ಹಿರಿಮೆ ತನ್ನಷ್ಟಕ್ಕೇಹೆಚ್ಚುತ್ತದೆ. ಆದರೆ ಇಬ್ಬರು ಆ ಪ್ರತಿಷ್ಠಿತ ಪ್ರಶಸ್ತಿಯ ಪುರಸ್ಕೃತರು, ಒಂದೇ ಬೀದಿಯಲ್ಲಿ ಅಥವಾ ರಸ್ತೆಯಲ್ಲಿ ವಾಸಿಸಿದರೆ ಅದು ಸಹಜವಾಗಿ ಪ್ರೇಕ್ಷಣೀಯ ಸ್ಥಳವಾಗುವುದರಲ್ಲಿ ಸಂದೇಹವೇ ಇಲ್ಲ. ಸೊವೆಟೋ ನಗರದಲ್ಲಿ ಆ ಇಬ್ಬರು ಪುರಸ್ಕೃತರು ಒಂದೇ ರಸ್ತೆಯಲ್ಲಿವಾಸಿಸುತ್ತಿದುದರಿಂದ ಅದಕ್ಕೆ 'ದಿ ನೊಬೆಲ್ ಸ್ಟ್ರೀಟ್' ಎಂದೇ ನಾಮಕರಣ ಮಾಡಲಾಗಿದೆ. ಇದೊಂದೇ ಕಾರಣಕ್ಕೆ ಈ ರಸ್ತೆ ವಿಶ್ವವಿಖ್ಯಾತ ಪ್ರೇಕ್ಷಣೀಯ ಸ್ಥಳವೆಂದು ಕರೆಯಿಸಿಕೊಂಡಿದೆ. ಜಗತ್ತಿನ ಬೇರೆಲ್ಲೂ, ಒಂದೇ ರಸ್ತೆಯಲ್ಲಿ ಒಂದಕ್ಕಿಂತ ಹೆಚ್ಚು ನೊಬೆಲ್ ಪ್ರಶಸ್ತಿ ಪುರಸ್ಕೃತರು ವಾಸವಾಗಿಲ್ಲ. ಆದರೆ ಸೊವೆಟೋ ನಗರದ 'ದಿ ನೊಬೆಲ್ ಸ್ಟ್ರೀಟ್'ನಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಮತ್ತು ಕರಿಯರ ನಾಯಕರಾಗಿದ್ದ ದಿವಂಗತ ನೆಲ್ಸನ್ ಮಂಡೇಲಾ ಮತ್ತು ಆರ್ಚಬಿಷಪ್ ಡೆಸ್ಮಂಡ್ ಟುಟು ಒಂದೇ ಬೀದಿಯಲ್ಲಿ ಕೆಲಕಾಲ ವಾಸವಾಗಿದ್ದರು. ಇವರಿಬ್ಬರೂ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರು. 1990ರಲ್ಲಿ ರಾಬನ್ ಐಲ್ಯಾಂಡಿನಿಂದ ಬಿಡುಗಡೆಯಾದಾಗ, ಮಂಡೇಲಾ ನೇರವಾಗಿ ಟುಟು ಅವರಮನೆಗೆ ತೆರಳಿ, ಅಲ್ಲಿಯೇ ತಂಗಿದ್ದರು. ಹೀಗಾಗಿ ಈ ಬೀದಿಗೆ ಮತ್ತು ಟುಟು ಅವರ ಮನೆಗೆ ವಿಶೇಷ ಮಹತ್ವ. ಸೊವೆಟೋ ನಗರಕ್ಕೆ ಬಂದವರು ಬೇರೆಲ್ಲಾದರೂ ಹೋಗುತ್ತಾರೋ ಇಲ್ಲವೋ, ಆದರೆ 'ದಿ ನೊಬೆಲ್ ಸ್ಟ್ರೀಟ್' ಗಂತೂ ಖಂಡಿತಾ ಭೇಟಿ ನೀಡುತ್ತಾರೆ. ಈ ಬೀದಿಗೆ ಭೇಟಿ ನೀಡದೇ ಯಾರೂ ಹೋಗುವುದಿಲ್ಲ. ಈ ಬೀದಿಗೆ ಮೊದಲು 'ವಿಲಕಾಜಿ ಸ್ಟ್ರೀಟ್' ಎಂದು ಕರೆಯುತ್ತಿದ್ದರು. ಯಾವಾಗ ಮಂಡೇಲಾ ಮತ್ತು ಟುಟು ಕೆಲವರ್ಷಗಳ ಕಾಲ ಅಲ್ಲಿ ನೆಲೆಸಿದ್ದರೋ ಮತ್ತು ಇಬ್ಬರೂ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದರೋ, ಆ ಬೀದಿಗೆ 'ದಿ ನೊಬೆಲ್ ಸ್ಟ್ರೀಟ್' ಎಂದು ಮರುನಾಮಕರಣ ಮಾಡಲಾಯಿತು. ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡುವ ಪ್ರವಾಸಿಗರ 'ನೋಡಲೇಬೇಕಾದ ತಾಣಗಳ ಪಟ್ಟಿ'ಯಲ್ಲಿ, ಈ ಬೀದಿಯೂ ಸೇರಿರುತ್ತದೆ. ಮಂಡೇಲಾ ಅವರ ಆತ್ಮಕತೆ Long Walk to Freedom ಕೃತಿಯಲ್ಲಿ, ಆ ರಸ್ತೆಯಲ್ಲಿರುವ ತಮ್ಮ ನಿವಾಸದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇಪ್ಪತ್ತೇಳು ವರ್ಷಗಳ ಸೆರೆಮನೆವಾಸದ ನಂತರ ನಾನು ಪತ್ನಿ ವಿನ್ನಿ ಜತೆಗೆ ಆ ಮನೆಗೆ ಆಗಮಿಸಿದಾಗ ಏನಾಯಿತು ಎಂಬುದನ್ನು ವಿವರಿಸಿದ್ದಾರೆ. ಈಗ ಮಂಡೇಲಾ ಅವರ ಮನೆ ಮ್ಯೂಸಿಯಂ ಆಗಿದೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧ ಯುದ್ಧ ಸಾರಿದ, ಜಾಗತಿಕ ಮನ್ನಣೆಗೆ ಪಾತ್ರರಾದ ನಾಯಕನಿಗೆ ಆಶ್ರಯ ನೀಡಿದ ನಿವಾಸಕ್ಕೆ ಇಂದು ಐತಿಹಾಸಿಕ ಮಹತ್ವ. ಮಂಡೇಲಾ ಜೈಲಿನಲ್ಲಿದ್ದಾಗ ಅವರ ಕೋಣೆ ನಂಬರ್ 8115 ಆಗಿತ್ತು. ಅದರ ಸ್ಮರಣಾರ್ಥ, ಇದೇ ಸಂಖ್ಯೆಯನ್ನು 'ದಿ ನೊಬೆಲ್ ಸ್ಟ್ರೀಟ್' ನಲ್ಲಿರುವ ಮಂಡೇಲಾ ಮನೆಗೂ ನೀಡಲಾಗಿದೆ. ಡೆಸ್ಮಂಡ್ ಟುಟು ಅವರು ಕೇಪ್ ಟೌನ್‌ನಲ್ಲಿ ವಾಸವಾಗಿದ್ದರೂ, ಜೋಹಾನ್ಸ್ ಬರ್ಗ್‌ಗೆ ಭೇಟಿ ನೀಡಿದಾಗಲೆಲ್ಲಾ ಸೊವೆಟೋದಲ್ಲಿರುವ ತಮ್ಮ ನಿವಾಸದಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಜೋಹಾನ್ಸ್ ಬರ್ಗ್‌ಗೆ ಭೇಟಿ ನೀಡಿದ ಜಾಗತಿಕ ನಾಯಕರು, ಗಣ್ಯರು ಈ ರಸ್ತೆಗೆ ಭೇಟಿ ಕೊಡುವುದು ಸಂಪ್ರದಾಯ. ದಿನದ ಯಾವ ಸಮಯದಲ್ಲಿ ಹೋದರೂ ಈ ರಸ್ತೆ ಪ್ರವಾಸಿಗರಿಂದ ಗಿಜಿಗುಡುತ್ತಿರುತ್ತದೆ.

ನನಗೆ ನಂಬಲಾಗಲೇ ಇಲ್ಲ, ನಾನು ಅವರನ್ನು ಆ ಸನ್ನಿವೇಶದಲ್ಲಿ ನಿರೀಕ್ಷಿಸಿರಲಿಲ್ಲ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ನಾನು ಇಂಗ್ಲೆಂಡ್‌ನಲ್ಲಿ ಪತ್ರಿಕೋದ್ಯಮ ವ್ಯಾಸಂಗ ಮಾಡುವಾಗ, ಪ್ರಮುಖ ರಾಜಕಾರಣಿಯೊಬ್ಬರನ್ನು ಭೇಟಿ ಮಾಡಿ ಸಂದರ್ಶಿಸುವ ಅಸೈನ್‌ಮೆಂಟ್ ನೀಡಿದ್ದರು. ನಾನು ಜೆಫ್ರಿ ಹೋವ್ ಅವರನ್ನು ಸಂದರ್ಶಿಸಲು ನಿರ್ಧರಿಸಿದ್ದೆ. ಕನ್ಸರ್ವೇಟಿವ್ ಪಕ್ಷದ ನಾಯಕರಾಗಿದ್ದ ಇವರು ಹದಿನಾಲ್ಕು ತಿಂಗಳುಗಳ ಕಾಲ ಬ್ರಿಟನ್ ಉಪಪ್ರಧಾನಿಯಾಗಿದ್ದರು. ಅಷ್ಟೇ ಅಲ್ಲ, ಇವರು ಬ್ರಿಟನ್ ಹಣಕಾಸು ಹಾಗೂ ವಿದೇಶಾಂಗ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು. ನಾನು ಭೇಟಿ ಮಾಡುವ ಸಂದರ್ಭದಲ್ಲಿ ಇವರು ಮಾಜಿಯಾಗಿದ್ದರು ಹಾಗೂ ತಮ್ಮ ಹುಟ್ಟೂರಾದ ವೇಲ್ಸ್‌ನ ಕಾರ್ಡಿಫ್‌ನಲ್ಲಿ ನೆಲೆಸಿದ್ದರು. ಹಾಗೆಂದು ಇವರು ನಿವೃತ್ತ ಜೀವನ ಸಾಗಿಸುತ್ತಿರಲಿಲ್ಲ. 'ರಾಯಿಟರ್ಸ್' ಸುದ್ದಿಸಂಸ್ಥೆ, ಪ್ರತಿಷ್ಠಿತ ಥಾಮ್ಸನ್ ಫೌಂಡೇಶನ್ ಸೇರಿದಂತೆ ಹತ್ತಾರು ಸಂಸ್ಥೆಗಳ ನಿರ್ದೇಶಕರು, ಧರ್ಮದರ್ಶಿಗಳಾಗಿದ್ದರು.

ನಿಗದಿತ ಸಮಯಕ್ಕಿಂತ ಐದು ನಿಮಿಷ ಮುಂಚಿತವಾಗಿ ಅವರ ನಿವಾಸಕ್ಕೆ ಹೋದಾಗ, ಗಾರ್ಡನ್‌ನಲ್ಲಿ ನೀರು ಹಾಕುತ್ತಿದ್ದ ವ್ಯಕ್ತಿಯನ್ನು ಕರೆದು, 'ನನಗೆ ಮಿಸ್ಟರ್ ಹೋವ್ ಜತೆಗೆ ಸಂದರ್ಶನಕ್ಕೆ ಸಮಯ ನಿಗದಿಯಾಗಿದೆ. ದಯವಿಟ್ಟು ನಾನು ಬಂದ ವಿಷಯವನ್ನು ಅವರಿಗೆ ತಿಳಿಸಬಹುದಾ?' ಎಂದು ಹೇಳಿದೆ. ಅದಕ್ಕೆ ಆ ವ್ಯಕ್ತಿ ತಕ್ಷಣ, 'Very nice to meet you, I am Geoffrey Howe. I am waiting for you' ಎಂದು ಕೈಕುಲುಕಿದರು. ನನಗೆ ನಂಬಲಾಗಲೇ ಇಲ್ಲ. ನಾನು ಅವರನ್ನು ಅಲ್ಲಿ, ಆ ಸನ್ನಿವೇಶದಲ್ಲಿ ನಿರೀಕ್ಷಿಸಿರಲಿಲ್ಲ. ಅದೇ ಹುಲ್ಲು ಹಾಸಿನ ಮೇಲೆ ಮಾತಾಡೋಣವಾ ಎಂದು ಕೇಳಿದರು. ನಾನು ಆಗಬಹುದು ಎಂದೆ. ಅವರೇ ಎರಡು ಆರಾಮ ಕುರ್ಚಿ ಹಾಗೂ ಟೀಪಾಯ್ ಎತ್ತಿಕೊಂಡು ತಂದಿಟ್ಟರು. ಒಂದು ನಿಮಿಷ ಕುಳಿತಿರಿ ಎಂದು ಮನೆಯೊಳಗೆ ಹೋಗಿ, ತಾವೇ ಎರಡು ಕಪ್ ಬಿಸಿಬಿಸಿ ಕಾಫಿ ಮಾಡಿ ಟೀಪಾಯ್ ಮೇಲೆ ತಂದಿಟ್ಟರು. ಸಂದರ್ಶನ ಮುಗಿದ ನಂತರ ಅವರ ಪತ್ನಿ ಹೊರಹೋಗಲು ಸಿದ್ಧರಾಗಿ ಬಂದರು. ಹೋವ್ ನನಗೆ ಅವರನ್ನು ಪರಿಚಯಿಸಿದರು. ಆನಂತರ ಪತ್ನಿಯೊಂದಿಗೆ ತಾವೇ ಡ್ರೈವ್ ಮಾಡಿಕೊಂಡು ಹೊರಟೇಬಿಟ್ಟರು!

ನನಗೆ ನಂಬಲಾಗಲೇ ಇಲ್ಲ. ಮೂವತ್ತು ವರ್ಷಗಳ ಕಾಲ ಬ್ರಿಟಿಷ್ ರಾಜಕಾರಣದಲ್ಲಿ ಕ್ರಿಯಾಶೀಲರಾಗಿದ್ದ, ಉಪಪ್ರಧಾನಿ ಸೇರಿದಂತೆ ಹಲವು ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡಿದ ವ್ಯಕ್ತಿಯ ಮನೆಯಲ್ಲಿ ಒಬ್ಬ ಆಳು, ಸೇವಕನೂ ಇರಲಿಲ್ಲ. ಅವರಿಗೆ ಮಾಜಿ ಉಪಪ್ರಧಾನಿ ಎಂಬ ಯಾವ ಸಣ್ಣ ಪೊಗರೂ ಇರಲಿಲ್ಲ. ಅದು ಯಾರಂತೆ ಊರವರಂತೆ ಎಲ್ಲರ ಮನೆಯಂತಿತ್ತು. ಅವರು ಡ್ರೈವ್ ಮಾಡಿಕೊಂಡು ಹೋದ ಕಾರೂ ಸಹ ಲಕ್ಸುರಿಯಾಗಿರಲಿಲ್ಲ.

ಈ ಎಲ್ಲ ಸಂಗತಿಗಳನ್ನು ನಾನು ನನ್ನ ಸಂದರ್ಶನದಲ್ಲಿ ಬರೆದಿದ್ದೆ. ಅದನ್ನು ಓದಿದ ನಮ್ಮ ಮೇಷ್ಟ್ರು-'ಅವೆಲ್ಲ ಬೋರಿಂಗ್ ಮಾಹಿತಿ. ನಮ್ಮ ದೇಶದಲ್ಲಿ ರಾಜಕಾರಣಿಗಳು ಇರೋದೇ ಹಾಗೆ. ಅದರಲ್ಲಿ ಹೆಚ್ಚುಗಾರಿಕೆಯೇನಿಲ್ಲ' ಎಂದು ಆರಂಭದ ನಾಲ್ಕು ಪ್ಯಾರಾಗಳನ್ನು ಕತ್ತರಿಸಿ(ಎಡಿಟ್) ಕಸದ ಬುಟ್ಟಿಗೆ ಬಿಸಾಡಿದ್ದರು. ಅಲ್ಲಿ ರಾಜಕಾರಣಿಗಳು ಇರೋದೇ ಹಾಗೆ.

ಡೆವಿಡ್ ಕೆಮರೂನ್ ಬ್ರಿಟನ್ ಪ್ರಧಾನಿಯಾಗಿದ್ದಾಗ, ಒಮ್ಮೆ ಅವರಿಗೆ ತುರ್ತಾಗಿ ಒಂದು ಸಭೆಗೆ ಹೋಗಬೇಕಿತ್ತು. ಆದರೆ ತಮ್ಮ ಕಾರಿನಲ್ಲಿ ಪ್ರಯಾಣಿಸಿದರೆ ತಡವಾಗಬಹುದೆಂದು ಅನಿಸಿತು. ದೇಶದ ಪ್ರಧಾನಿಯಾಗಿ ಅವರು 'ಜೀರೋ ಟ್ರಾಫಿಕ್' ಮಾಡಿಕೊಂಡು ನಿಗದಿತ ಸಮಯಕ್ಕೆ ಹೋಗಬಹುದಿತ್ತು. ಹಾಗೆ ಮಾಡಿದರೆ, ಜನನಿಬಿಡ ಲಂಡನ್ ಬೀದಿಗಳಲ್ಲಿರುವ ಲಕ್ಷಾಂತರ ಜನರಿಗೆ ತೊಂದರೆಯಾಗಬಹುದೆಂಬ ಕಾರಣಕ್ಕೆ ಅವರು ಅಂಡರ್ ಗ್ರೌಂಡ್ ರೈಲಿನಲ್ಲಿ ಪ್ರಯಾಣಿಸಲು ನಿರ್ಧರಿಸಿದರು. ಕೆಮರೂನ್ ಏರಿದ ಬೋಗಿಯಲ್ಲಿ ಸೀಟುಗಳು ಖಾಲಿ ಇರಲಿಲ್ಲ. ತಾನು ಪ್ರಧಾನಿ, ತನಗೆ ಸೀಟು ಬಿಟ್ಟುಕೊಡಿ ಎಂದು ಅವರು ಕೇಳಲೂ ಇಲ್ಲ. ಕೆಲವು ಪ್ರಯಾಣಿಕರಿಗೆ ತಮ್ಮೊಂದಿಗಿರುವ ಸಹಪ್ರಯಾಣಿಕ ತಮ್ಮ ಪ್ರಧಾನಿ ಎಂದು ಗೊತ್ತಾದರೂ, ಅವರೇನು ಮುಗಿಬೀಳಲಿಲ್ಲ. ಒಂದಿಬ್ಬರು ತಮ್ಮ ಸೀಟುಗಳನ್ನು ತೆರವು ಮಾಡಿಕೊಡಲು ಮುಂದಾದರೂ ಕೆಮರೂನ್ ಅದನ್ನು ವಿನಯಪೂರ್ವಕವಾಗಿ ತಿರಸ್ಕರಿಸಿದರು. ಅವರ ಜತೆ ಭದ್ರತಾ ಸಿಬ್ಬಂದಿ ದಂಡೂ ಇರಲಿಲ್ಲ. ದೇಶದ ಪ್ರಧಾನಿ ಸುಮಾರು ಅರ್ಧ ಗಂಟೆ ನಿಂತು, ಪೇಪರ್ ಓದುತ್ತಾ, ಸಹಪ್ರಯಾಣಿಕರೊಂದಿಗೆ ಮಾತಾಡುತ್ತಾ, ತಾವು ಇಳಿಯಬೇಕಾದ ನಿಲ್ದಾಣ ಬರುತ್ತಿದ್ದಂತೆ, ಯಾರಂತೆ ಊರವರಂತೆ ಸುಮ್ಮನೆ ಇಳಿದು ಹೋದರು! ಈ ರೀತಿ ಒಂದೆರಡು ಸಲ ಅಲ್ಲ, ಅನೇಕ ಬಾರಿ ಅವರು ರೈಲಿನಲ್ಲಿ ಹೋಗಿದ್ದುಂಟು!

ಪ್ರಧಾನಿಯಾಗಿದ್ದಾಗ ಅವರು ಬೆಳಗ್ಗೆ ಆಫೀಸಿಗೆ ಹೋಗುವ ಮುನ್ನ ಅವರ ನಿವಾಸದಲ್ಲಿನ ಅಡುಗೆ ಮನೆಯಲ್ಲಿ ಸ್ವತಃ ಅವರೇ ಉಪಾಹಾರ ಸಿದ್ಧಪಡಿಸಿಕೊಳ್ಳುತ್ತಿದ್ದರು.ಅವರ ನಿವಾಸದಲ್ಲೆಲ್ಲಾ ಕೈಗೆ ಕಾಲಿಗೆ ಆಳು-ಕಾಳುಗಳು ಸಹ ಇರಲಿಲ್ಲ. ಉಪಾಹಾರ ತಯಾರಿಸಿ, ಕಾಫಿ ಸಿದ್ಧಪಡಿಸಿ ಸೇವಿಸಿದ ನಂತರ, ತಾವೇ ಪಾತ್ರೆ ತೊಳೆಯುವ ದೃಶ್ಯ ನೋಡಿ ಲಕ್ಷಾಂತರ ಮಂದಿ ಜಗತ್ತಿನೆಲ್ಲೆಡೆಯಿಂದ ಅವರಿಗೆ ಪ್ರಶಂಸೆ ಸುರಿಮಳೆಗೈದಿದ್ದರು.

ಕೆಮರೂನ್ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ, 'ಟೆನ್ ಡೌನಿಂಗ್ ಸ್ಟ್ರೀಟ್'ನಲ್ಲಿರುವ ತಮ್ಮ ಅಧಿಕೃತ ನಿವಾಸ ಖಾಲಿ ಮಾಡುವ ಸಂದರ್ಭ ಬಂದಾಗ, ಮನೆ ಸಾಮಾನು-ಸರಂಜಾಮುಗಳನ್ನು ಪ್ಯಾಕ್ ಮಾಡಿ ವಾಹನಕ್ಕೆ ತಾವೇ ಎತ್ತಿ ತುಂಬುತ್ತಿರುವ ದೃಶ್ಯವೂ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿತ್ತು. ಇಂದಿಗೂ ಅವರ ಮನೆಯಲ್ಲಿ ಮಾಜಿ ಪ್ರಧಾನ ಮಂತ್ರಿಯ ಯಾವ ಲವ-ಲೇಶವನ್ನೂ ಕಾಣಲು ಸಾಧ್ಯವಿಲ್ಲ, ಈಗಲೂ ಅವರನ್ನು ಲಂಡನ್ನಿನ ಗಿಜಿಗುಡುವ ಟ್ರೇನ್‌ನಲ್ಲಿ ಆಗಾಗ ಕಾಣಬಹುದು.

ಕೆಲವು ವರ್ಷಗಳ ಹಿಂದೆ, ಸ್ವಿಟ್ಜರ್ಲ್ಯಾಂಡ್ ಅಧ್ಯಕ್ಷ ಡಿಡಿಯನ್ ಬರ್ಕಾಲ್ಟರ್ ರೈಲಿಗೆ ಕಾಯುತ್ತಾ ನಿಲ್ದಾಣದಲ್ಲಿ ನಿಂತು ಸ್ಮಾರ್ಟ್ ಫೋನ್‌ನಲ್ಲಿ ಮೆಸೇಜ್‌ಗಳನ್ನು ಓದುತ್ತಿದ್ದರು. ರೈಲು ಬರಲು ಕೆಲವು ನಿಮಿಷಗಳಿದ್ದವು. ರೈಲಿಗಾಗಿ ಹಲವು ಮಂದಿ ಕಾಯುತ್ತಿದ್ದರು. ಅವರಾರಿಗೂ ತಮ್ಮ ಪಕ್ಕದಲ್ಲಿ ಆ ರಾಷ್ಟ್ರದ ಅಧ್ಯಕ್ಷ ರೈಲಿಗಾಗಿ ಬರಹಾಯುತ್ತಿದ್ದಾರೆಂಬುದೂ ಗೊತ್ತಿರಲಿಲ್ಲ, ಕಾರಣ ಅಧ್ಯಕ್ಷನ ಜತೆ ಅಂಗರಕ್ಷಕರೂ ಇರಲಿಲ್ಲ, (ಸಾಮಾನ್ಯವಾಗಿ ಅಮೆರಿಕ ಅಧ್ಯಕ್ಷ ಬಂದರೆ ಅವರ ಸುತ್ತ ಭದ್ರತಾ ಸಿಬ್ಬಂದಿ, ಹತ್ತಾರು ವಾಹನಗಳು ಸುತ್ತುವರಿದಿರುತ್ತವೆ.) ಈ ದೃಶ್ಯವನ್ನು 'ಲೀ ಟೆಂಪ್' ಪತ್ರಿಕೆಯ ವರದಿಗಾರ ಸೆರ್ಜ್ ಜುಬಿನ್ ಎಂಬಾತ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದು, ಟ್ವೀಟ್ ಮಾಡಿದಾಗಲೇ ಗೊತ್ತಾಗಿದ್ದು!

ಇತ್ತೀಚೆಗೆ ಡಚ್ (ನೆದರ್‌ಲ್ಯಾಂಡ್) ಪ್ರಧಾನಿ ಮಾರ್ಕ್ ರುಟ್ ಅವರು ನೆಲದ ಮೇಲೆ ಚೆಲ್ಲಿದ ಕಾಫಿಯನ್ನು ಸ್ವತಃ ಒರೆಸಿದ್ದು ವಿಶ್ವದೆಲ್ಲೆಡೆ ಭಾರೀ ವೈರಲ್ ಆಯಿತು. ಹೇಗ್‌ನಲ್ಲಿ ಆರೋಗ್ಯ ಖಾತೆಯಿರುವ ಬಿಲ್ಡಿಂಗ್‌ನಲ್ಲಿ ಮೀಟಿಂಗ್‌ಗೆಂದು ರುಟ್ ಅವರು ಅವಸರದಲ್ಲಿ ಹೊರಟಿದ್ದರು. ಒಂದು ಕೈಯಲ್ಲಿ ಫೈಲುಗಳನ್ನು ಹಿಡಿದಿದ್ದರು. ಮತ್ತೊಂದು ಕೈಯಲ್ಲಿ ಕಾಫಿ ಇತ್ತು. ಆ ಕಪ್ ಅಚಾನಕ್ ಆಗಿ ಕೈಯಿಂದ ಕೆಳಗೆ ಬಿದ್ದಿತು. ನೆಲದ ಮೇಲೆಲ್ಲ ಕಾಫಿ ಚೆಲ್ಲಿತು. ತಕ್ಷಣ ಪ್ರಧಾನಿ ರುಟ್ ಪಕ್ಕದಲ್ಲಿಯೇ ಇದ್ದ ನೆಲ ಒರೆಸುವ ಕೈಪಿಡಿ(Mop)ಯಿಂದ ಚೆಲ್ಲಿದ ಕಾಫಿಯನ್ನು ಒರೆಸಿದರು. ದೇಶದ ಪ್ರಧಾನಿಯಾಗಿ ಅವರು ಹಾಗೇ ಹೋಗಬಹುದಾಗಿತ್ತು. ಆದರೆ ಅದರಿಂದ ನೆಲ ಕೊಚ್ಚೆಯಾಗುತ್ತಿತ್ತು. ಬೇರೆಯವರು ಕಾಲಿಟ್ಟು ಬೀಳುವ ಸಾಧ್ಯತೆಯೂ ಇತ್ತು. ಒಬ್ಬ ಪ್ರಧಾನಿಯಾಗಿ ಅವರು ನೆಲ ಒರೆಸಬೇಕೆಂದು ಯಾರೂ ನಿರೀಕ್ಷಿಸಿರಲಿಲ್ಲ, ನೆಲ ಒರೆಸದೇ ಹಾಗೇ ಹೋಗಿದ್ದಿದ್ದರೆ ಯಾರೂ ಏನೂ ಅಂದುಕೊಳ್ಳುತ್ತಿರಲಿಲ್ಲ. ಆದರೆ ರುಟ್ ತಾವೇ ನೆಲ ಒರೆಸಿದರು. ನಮ್ಮ ದೇಶದಲ್ಲಿ ಹೀಗಾಗಿದ್ದರೆ ಏನಾಗುತ್ತಿತ್ತು ಎಂಬುದನ್ನು ಊಹಿಸಬಹುದು.

ನೆದರ್‌ಲ್ಯಾಂಡ್ ಸುಮಾರು ಒಂದು ಕೋಟಿ ಎಪ್ಪತ್ತು ಲಕ್ಷ ಜನಸಂಖ್ಯೆ ಇರುವ ಪುಟ್ಟ ದೇಶ. ಕಳೆದ ವರ್ಷ ಯಾವುದೇ ಪಕ್ಷಕ್ಕೂ ಬಹುಮತ ಬರದೇ ರಾಜಕೀಯ ಗೊಂದಲ, ಅನಿಶ್ಚಿತತೆಯುಂಟಾಗಿತ್ತು. ಆನಂತರ ಮಾರ್ಕ್ ರುಟ್ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ಬಂದಿತು. ಪ್ರಧಾನಿಯಾದ ಹೊಸತರಲ್ಲಿ ರುಟ್ ಅವರು ಕಿಂಗ್ ವಿಲಿಯಂ ಅಲೆಕ್ಸಾಂಡರ್ ಅರಮನೆಯಲ್ಲಿ 'ಡಚ್ ಹೆಡ್ ಆಫ್ ದಿ ಸ್ಟೇಟ್' ಅವರನ್ನು ಕಾಣಲು ಹೋಗಿದ್ದರು. ಅಲ್ಲಿಗೆ ಹೋಗುವಾಗ ತಮ್ಮ ಬೆಂಗಾವಲು ಪಡೆ, ಗುಂಡು ನಿರೋಧಕ ವಾಹನದ ಬದಲಿಗೆ ಬೈಸಿಕಲ್ಲನ್ನು ಏರಿ ಹೋಗಿದ್ದರು! ರಾಜನನ್ನು ನೋಡಲು ಪ್ರಧಾನಿ ಸೈಕಲ್‌ನಲ್ಲಿ ! ಅರಮನೆ ಮುಂದೆ ಸೈಕಲ್‌ಗೆ ಬೀಗ ಹಾಕಿ ಒಳ ನಡೆದಿದ್ದರು!

ನೀವು ಜೋಸ್ 'ಪೆಪ್' ಮುಜಿಕಾ ಅವರ ಹೆಸರನ್ನು ಕೇಳಿರಬಹುದು, ಇವರು ಉರುಗ್ವೆ ದೇಶದ ಅಧ್ಯಕ್ಷರಾಗಿದ್ದರು. ಅವರು 'ಜಗತ್ತಿನ ಅತ್ಯಂತ ಬಡ ಅಧ್ಯಕ್ಷ' ಎಂದೇ ಪ್ರಸಿದ್ಧ. ಮೂಲತಃ ಗೆರಿಲ್ಲಾ ಫೈಟರ್ ಆಗಿದ್ದ ಮುಜಿಕಾ ಹದಿನಾಲ್ಕು ವರ್ಷ ಜೈಲಿನಲ್ಲಿದ್ದರು. ಅತ್ಯಂತ ಘನಘೋರ ಶಿಕ್ಷೆಯನ್ನು ಅನುಭವಿಸಿದರು. 2009 ರಲ್ಲಿ ಉರುಗ್ವೆ ಅಧ್ಯಕ್ಷನಾಗಿ ಆಯ್ಕೆಯಾದಾಗ, ಅರಮನೆಯಂಥ ವಿಲಾಸಿ ಅಧಿಕೃತ ನಿವಾಸದಲ್ಲಿ ಉಳಿಯುವ ಬದಲು ತನ್ನ ಪತ್ನಿಯೊಂದಿಗೆ ಸಾಮಾನ್ಯ ಗುಡಿಸಲಿನಲ್ಲಿ ವಾಸಿಸಲು ಆರಂಭಿಸಿದರು. ಅರಮನೆಯಲ್ಲಿ ಅಧ್ಯಕ್ಷರ ಸೇವೆಗೆಂದು ಅರವತ್ತೈದು ಸೇವಕರಿದ್ದರು. ಅವರೆಲ್ಲರನ್ನು ಬೇರೆ ಬೇರೆ ಕೆಲಸಗಳಿಗೆ ವರ್ಗ ಮಾಡಿದರು. ಅಗತ್ಯವಿದ್ದಾಗ ಮಾತ್ರ ಕರೆಯುವುದಾಗಿ ಹೇಳಿದರು.

ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಪಡೆದ ಸರಕಾರಿ ಸಂಬಳದ ಶೇ.90 ರಷ್ಟು ಹಣವನ್ನು ದಾನ ಮಾಡಿದರು. ಅವರ ಬಳಿಯಿದ್ದ ಏಕಮಾತ್ರ ಲಕ್ಸುರಿ ಅಂದರೆ ವೋಲ್ಕ್ಸ್ ವಾಗೆನ್ ಬೀಟಲ್ ಕಾರು. ಅದನ್ನು ಅವರು 1987 ರಲ್ಲಿ ಖರೀದಿಸಿದ್ದರು. ಸರಕಾರಿ ಖರ್ಚಿನಲ್ಲಿ ದುಂದು ವೆಚ್ಚ ಮಾಡುವ ಜಾಗತಿಕ ನಾಯಕರನ್ನು ಬಹಿರಂಗವಾಗಿಯೇ ಟೀಕಿಸಿದ ಮುಜಿಕಾ, ಜನರ ಹಣದಲ್ಲಿ ಮೋಜು ಉಡಾಯಿಸಲು ಅಧ್ಯಕ್ಷರಿಗೆ ಅಥವಾ ಪ್ರಧಾನಿಗಳಿಗೆ ನೈತಿಕ ಹಕ್ಕಿಲ್ಲ ಎಂದು ಬಲವಾಗಿ ಪ್ರತಿಪಾದಿಸಿದರು.

ಕೆಲವು ವರ್ಷಗಳ ಹಿಂದೆ ನಾನು ಆಫ್ರಿಕಾದ ರವಾಂಡಾ ದೇಶಕ್ಕೆ ಹೋದಾಗ, ಅಲ್ಲಿನ ರಾಜತಾಂತ್ರಿಕ ಅಧಿಕಾರಿಯೊಬ್ಬರು ಹೇಳಿದ ಪ್ರಸಂಗವಿದು. ಆಫ್ರಿಕಾದಲ್ಲಿ ಮಲಾವಿ ಎಂಬ ಪುಟ್ಟ ದೇಶವಿದೆ. 2012 ರಿಂದ ಎರಡು ವರ್ಷಗಳ ಕಾಲ ಆ ದೇಶವನ್ನು ಜಾಯ್ಸ್ ಬಂಡಾ ಎಂಬಾಕೆ ಅಧ್ಯಕ್ಷೆಯಾಗಿದ್ದರು. ಆಕೆ ಅಧ್ಯಕ್ಷೆಯಾಗುತ್ತಲೇ, ಅಧ್ಯಕ್ಷರು ಮಾತ್ರ ಬಳಸುತ್ತಿದ್ದ ಜೆಟ್ ವಿಮಾನ ಮಾರಿಬಿಟ್ಟಳು. ವಿಮಾನದಲ್ಲಿ ಪ್ರಯಾಣ ಮಾಡುವ ಪ್ರಸಂಗ ಬಂದಾಗ ಪ್ಯಾಸೆಂಜರ್ ವಿಮಾನದಲ್ಲಿ ಹೋಗುತ್ತಿದ್ದಳು. ವಿದೇಶ ಪ್ರವಾಸದಲ್ಲೂ ಸಾರ್ವಜನಿಕ ವಿಮಾನವನ್ನೇ ಬಳಸುತ್ತಿದ್ದಳು.

ಅಧ್ಯಕ್ಷರು ವಿವಿಧ ಸಂದರ್ಭ, ಸನ್ನಿವೇಶಗಳಲ್ಲಿ ಬಳಸುತ್ತಿದ್ದ ಅರವತ್ತು ಬೆಂಜ್ ಕಾರುಗಳನ್ನು ಸಹ ಮಾರಾಟ ಮಾಡಿಬಿಟ್ಟಳು. ವಿಮಾನ ಮತ್ತು ಕಾರುಗಳನ್ನು ಮಾರಿದ್ದರಿಂದ ಬಂದ ಹಣವನ್ನು ಬಡವರ ಭೋಜನ ಯೋಜನೆಗೆ ನಿಯೋಜಿಸುವಂತೆ ಹೇಳಿದಳು. ಇದರಿಂದ ಹತ್ತು ಲಕ್ಷ ಜನರಿಗೆ ಮಧ್ಯಾಹ್ನದ ಬಿಸಿಯೂಟ ಸಿಗುವಂತಾಯಿತು. ಅಷ್ಟು ಜನರ ಉಪವಾಸಕ್ಕೆ ಕಾರಣವಾದ ಐಷಾರಾಮಿ ಜೀವನ ತನಗೆ ಬೇಡ ಎಂದು ಆಕೆ ಎಲ್ಲವನ್ನೂ ತಿರಸ್ಕರಿಸಿದಳು.

ನಾನು 2015 ರ ಡಿಸೆಂಬರ್‌ನಲ್ಲಿ ನೇಪಾಳದ ಕಟ್ಮಂಡುವಿನಲ್ಲಿ ಆ ದೇಶದ ಮಾಜಿ ಪ್ರಧಾನಿ ಸುಶೀಲ್ ಕೊಯಿರಾಲ ಅವರನ್ನು ಭೇಟಿ ಮಾಡಿದ್ದೆ. ಅವರು ಪ್ರಧಾನಿ ಪಟ್ಟದಿಂದ ಕೆಳಗಿಳಿದು ಕೇವಲ ಒಂದು ತಿಂಗಳಾಗಿತ್ತು. ಅವರಿಗೆ ತಮ್ಮದೆನ್ನುವ ಒಂದು ಮನೆಯೂ ಇರಲಿಲ್ಲ. ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವುದಕ್ಕಿಂತ ಮುನ್ನ ಅವರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಕೆಲ ಕಾಲ ಬಾಡಿಗೆ ಹಣ ಹೊಂದಿಸಲಾಗದೆ ಅವರು ತಮ್ಮ ಸಹೋದರನ ಮನೆಯಲ್ಲಿ ವಾಸಿಸುತ್ತಿದ್ದರು.

ನಾನು ಕಟ್ಮಂಡುವಿನಲ್ಲಿ ಇದ್ದ ಸಂದರ್ಭದಲ್ಲೇ ಒಂದು ಸುದ್ದಿ ಪ್ರಕಟವಾಗಿತ್ತು. ಅದೇನೆಂದರೆ, ಸುಶೀಲ್ ಕೊಯಿರಾಲ ಅವರ ಆಸ್ತಿಗಳೆಂದರೆ ಮೂರು ಮೊಬೈಲ್ ಫೋನುಗಳು ಮಾತ್ರ ಎಂದು.

'ಸರಕಾರದ ಹಣ ಬಳಸುವುದೆಂದರೆ ಹಂಗಿನ, ನಂಜಿನ ಹಣ ಬಳಸಿದಂತೆ. ನಾನು ಜನರ ಹಣ ಬಳಸುವುದಿಲ್ಲ, ನನಗಾಗಿ ಸರಕಾರ ಏನನ್ನೂ ಖರ್ಚು ಮಾಡಬೇಕಿಲ್ಲ, ನನಗೆ ಜನ ಅಧಿಕಾರ ಕೊಟ್ಟಿರುವುದು ದರ್ಪ ಮೆರೆಯಲು ಅಲ್ಲ' ಎಂದು ಅವರು ಹೇಳುತ್ತಿದ್ದರು. ರಾಜಮನೆತನದವರ ಹೊರತಾಗಿ ಬೇರೆ ಯಾರೂ ಅಧಿಕಾರಕ್ಕೇರಲು ಅಸಾಧ್ಯ, ಪ್ರಧಾನಮಂತ್ರಿ ಹುದ್ದೆ ಹಣವಂತರಿಗೆ ಮಾತ್ರ ಮೀಸಲು ಎಂಬ ಸ್ಥಾಪಿತ ನಿಯಮವನ್ನು ಕಿತ್ತೆಸೆದು ಪ್ರಧಾನಿಯಾಗಿದ್ದ ಕೊಯಿರಾಲ ಕೊನೆ ತನಕ ಹಾಗೇ ಇದ್ದರು.

ಇತ್ತೀಚೆಗೆ ನ್ಯೂಜಿಲ್ಯಾಂಡ್ ಪ್ರಧಾನಿ ಜಸಿಂದ ಆರ್ಡರ್ನ್ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಕಳೆದ ಮೂವತ್ತು ವರ್ಷಗಳಲ್ಲಿ ಅಧಿಕಾರದಲ್ಲಿರುವಾಗಲೇ ಹಡೆದವಳೆಂಬ ಪ್ರಖ್ಯಾತಿಗೆ ಒಳಗಾದ ಆರ್ಡರ್ನ್, ಹೆರಿಗೆ ಬೇನೆ ಶುರುವಾಗುತ್ತಿದ್ದಂತೆ ಆಯ್ದುಕೊಂಡಿದ್ದು ಸರಕಾರಿ ಆಸ್ಪತ್ರೆಯನ್ನು. ಅವಳು ಯಾವ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳಬಹುದು ಎಂಬ ಬಗ್ಗೆ ತೀವ್ರ ಕುತೂಹಲವಿತ್ತು. ಪ್ರಧಾನಿಯಾಗಿ ಆಕೆ ಖಾಸಗಿ ಆಸ್ಪತ್ರೆಯನ್ನು ಆಯ್ದುಕೊಳ್ಳಬಹುದಿತ್ತು. ಆದರೆ ಆಯ್ದುಕೊಂಡಿದ್ದು ಸರಕಾರಿ ಆಸ್ಪತ್ರೆಯನ್ನು. ನಮ್ಮ ದೇಶದಲ್ಲಿ ಪ್ರಧಾನಿ ಬಿಡಿ, ಒಬ್ಬ ಶಾಸಕ ಅಥವಾ ಕಾರ್ಪೊರೇಟರ್ ಕೂಡ ತನ್ನ ಹೆಂಡತಿಯನ್ನು ಸರಕಾರಿ ಆಸ್ಪತ್ರೆಗೆ ಸೇರಿಸುತ್ತಾನಾ? ಸಾಧ್ಯವೇ ಇಲ್ಲ.

ನಾನು ಇಷ್ಟೆಲ್ಲಾ ಹೇಳಲು ಕಾರಣವಿದೆ. ಇಂದಿನ ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. ಅದೇನೆಂದರೆ, ಮಂಡ್ಯದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಧಿಕಾ ಅವರು ತಮ್ಮ ಮನೆ ಚಾಕರಿಗೆ ಹದಿನೆಂಟು ಪೊಲೀಸರನ್ನು ಇಟ್ಟುಕೊಂಡಿದ್ದಾರಂತೆ ! ಇವರೆಲ್ಲಾ ಆರ್ಡರ್ಲಿಗಳು. ಎರಡು ವರ್ಷಗಳ ಹಿಂದೆಯೇ ರಾಜ್ಯ ಸರಕಾರ ಈ ಆರ್ಡರ್ಲಿ ಪದ್ಧತಿಯನ್ನು ರದ್ದುಪಡಿಸಿದೆ. ಬ್ರಿಟಿಷ್ ಆಡಳಿತದ ಪಳೆಯುಳಿಕೆಯಂತಿರುವ ಈ ಪದ್ಧತಿ ಗುಲಾಮಿ ಅಥವಾ ಜೀತ ಸಂಸ್ಕೃತಿಯ ಅಸಹ್ಯದ, ಅತಿರೇಕದ ಪ್ರದರ್ಶನ.

ಪೊಲೀಸು ಆಫೀಸರರ ಮನೆಯಲ್ಲಿ ಬಟ್ಟೆ ಒಗೆಯುವುದು, ಅವರ ಹೆಂಡಿರ ಸೀರೆ ತೊಳೆಯುವುದು, ಅಡುಗೆ ಮಾಡುವುದು, ಮನೆ ಗುಡಿಸಿ ಸ್ವಚ್ಛ ಗೊಳಿಸುವುದು, ಪಾತ್ರೆ ತೊಳೆಯುವುದು, ಮಕ್ಕಳನ್ನು ಶಾಲೆಗೆ ಕಳಿಸಿ, ಕರೆದುಕೊಂಡು ಬರುವುದು, ಗಿಡಗಳಿಗೆ ನೀರು ಹಾಕುವುದು, ಸಾಹೇಬ್ರು ಸಾಕಿದ ನಾಯಿಯನ್ನು ಹೊರಗೆ ಅಡ್ಡಾಡಿಸಿಕೊಂಡು ಬರುವುದು.. ಇವೇ ಅವರ ಚಾಕರಿ. ರಾಜ್ಯದಲ್ಲಿ ಈ ಥರದ ಕೆಲಸ ಮಾಡುವ ಮೂರು ಸಾವಿರ ಆರ್ಡರ್ಲಿಗಳು ಪೊಲೀಸು ಅಧಿಕಾರಿಗಳ ಮನೆಯ ಲ್ಲಿದ್ದರು. ಅವರನ್ನು ಬೇರೆ ಕಡೆ ವರ್ಗಾಯಿಸಿದರೂ ಪೊಲೀಸು ಅಧಿಕಾರಿಗಳು ಅವರನ್ನು ತಮ್ಮ ಮನೆಯಲ್ಲಿ ಕೆಲಸಕ್ಕಿಟ್ಟುಕೊಂಡಿ ದ್ದಾರೆಂಬುದು ಇದರಿಂದಲೇ ಗೊತ್ತಾಗುತ್ತದೆ.

ಎಎಸ್ಪಿ ಮಟ್ಟದ ಅಧಿಕಾರಿಗಳು ಸಹ ತಮ್ಮ ಮನೆ ಚಾಕರಿ ಮಾಡಬೇಕೆಂದು ಎಸ್ಪಿ ರಾಧಿಕಮ್ಮನವರು ಆದೇಶ ಹೊರಡಿಸಿರಬೇಕು. ಅವರೆಲ್ಲ ಈ ಅಮ್ಮನವರ ಮನೆಯಲ್ಲಿ ಹಾಜರಿ ಹಾಕಿ, ಮನೆ ಕೆಲಸ ಮಾಡಿ ಠಾಣೆಗೆ ಹೋಗಬೇಕು. ಎಸ್ಪಿಯಮ್ಮನ ಮನೆ ಬ್ರಿಟಿಷರ ಕಾಲದ್ದು. ವಿಶಾಲವಾದ ಕೋಣೆ, ಗಾರ್ಡನ್ ಗಳ ನಿರ್ವಹಣೆಗೆ ಮೂರು ಜನರನ್ನು ಸರಕಾರವೇ ನೀಡುತ್ತದೆ. ಆದರೆ ರಾಧಿಕಮ್ಮನವರಿಗೆ ಇದ್ದರೆ 'ಮಹಾರಾಣಿ' ಥರ ಇರಬೇಕೆಂಬ ಆಸೆ. ಹೀಗಾಗಿ ತಮ್ಮ ಅಧೀನದಲ್ಲಿರುವ ಪೊಲೀಸರಿಗೆ ತಮ್ಮ ಮನೆಯಲ್ಲಿ ಡ್ಯೂಟಿ ಮಾಡಿ ಸ್ಟೇಷನ್‌ಗೆ ಬರುವಂತೆ ಸೂಚಿಸಿದ್ದಾರೆ. ಸರಕಾರ ಪಗಾರ ಕೊಡುತ್ತದೆ, ಪೊಲೀಸರು ಮಾಡೋದು ಮಾತ್ರ ಇವರ ಮನೆಯ ಕೆಲಸ. ಹೇಗಿದೆ ದರ್ಬಾರು ?

ಅಮ್ಮನವರ ಮನೆಯಲ್ಲಿ ಪ್ರತಿದಿನ ಚಾಕರಿ ಮಾಡಿ ಮಾಡಿ ತಲೆಕೆಟ್ಟ ಪೊಲೀಸನೊಬ್ಬ ಇವನ್ನೆಲ್ಲ ಮೊಬೈಲಿನಲ್ಲಿ ಸೆರೆ ಹಿಡಿದು ಬಿಟ್ಟಿದ್ದಾನೆ. ಈ ವಿಡಿಯೋ ತುಣುಕು ವೈರಲ್ ಆಗುತ್ತಿದ್ದಂತೆ ಕಂಗಾಲಾದ ರಾಧಿಕಮ್ಮ ಹೇಳಿದ್ದೇನು ಗೊತ್ತಾ? 'ನಾನೇನು ಇವರಿಗೆಲ್ಲ ನಮ್ಮ ಮನೆಯಲ್ಲಿ ಕೆಲಸ ಮಾಡಿ ಎಂದು ಹೇಳಿಲ್ಲ, ಅವರೇ ಸ್ವಯಂ ಸ್ಫೂರ್ತಿಯಿಂದ ಬಂದು ಕೆಲಸ ಮಾಡಿ ಹೋಗುತ್ತಿದ್ದಾರೆ'! ಪೊಲೀಸರು ಸ್ವಯಂ ಸ್ಫೂರ್ತಿಯಿಂದ ಕೆಲಸ ಮಾಡಲು ರಾಧಿಕಮ್ಮನವರ ಮನೆಯೇನು ವಾರ್ಧಾ ಆಶ್ರಮವಾ? ರಾಘವೇಂದ್ರ ಸ್ವಾಮಿ ಮಠವಾ? ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಡವೇ? ತನ್ನ ಕೈಕೆಳಗಿನ ಸಿಬ್ಬಂದಿಯನ್ನು ನಡೆಸಿಕೊಳ್ಳುವುದು ಹೀಗಾ? ಪೊಲೀಸರನ್ನು ಇಷ್ಟು ಕೀಳಾಗಿ ನಡೆಸಿಕೊಳ್ಳಲು ಅವರಿಗೆ ಮನಸ್ಸಾದರೂ ಹೇಗೆ ಬಂತು? ಸರಕಾರದ ದುಡ್ಡಲ್ಲಿ ಮೋಜು, ಮಜಾ ಮಾಡಲು ಮಿತಿ ಬೇಡವೇ? ತೀಟೆಯಿದ್ದರೆ ತಮ್ಮ ಸ್ವಂತ ಹಣದಿಂದ ಆಳು-ಕಾಳುಗಳನ್ನು ಇಟ್ಟುಕೊಳ್ಳಲಿ, ಯಾರೂ ಬೇಡ ಅನ್ನೊಲ್ಲ, ಪೊಲೀಸರೇನು ಇವರ ಮನೆಯ ಗುಲಾಮರಾ? ಜೀತದಾಳುಗಳಾ? ಹದಿನೆಂಟು ಜನರನ್ನು ತನ್ನ ಮನೆ ಕೆಲಸಕ್ಕೆ ಹಚ್ಚುವ ಇವರು ತನ್ನನ್ನು ಇಂಗ್ಲೆಂಡಿನ ರಾಣಿ ಅಂತ ಭಾವಿಸಿದ್ದಾರಾ ? ಇವರಿಗೇನೂ ಶಿಕ್ಷೆ ಇಲ್ಲವಾ ?

ಈ ರಾಧಿಕಮ್ಮನ ಸುದ್ದಿ ಓದಿದ ಬಳಿಕ ಜೆಫ್ರಿ ಹೋವ್, ಡೇವಿಡ್ ಕೆಮರೂನ್, ಡಿಡಿಯರ್ ಬರ್ಕಾಲ್ಟರ್, ಮಾರ್ಕ್ ರುಟ್, ಸ್ವಿಟ್ಜರ್ಲ್ಯಾಂಡ್ ಪ್ರಧಾನಿ, ಉರುಗ್ವೆ ಅಧ್ಯಕ್ಷ, ಮಲಾವಿ ಅಧ್ಯಕ್ಷೆ, ನ್ಯೂಜಿಲ್ಯಾಂಡ್ ಪ್ರಧಾನಿ... ಅವರೆಲ್ಲ ಜ್ಞಾಪಕಕ್ಕೆ ಬಂದರು!

ಪೂರ್ವಿಕರ ಪುಣ್ಯವೇ ಪ್ರಗತಿಗೆ ಪೂರಕ

ಪ್ರಾಣೇಶ್ ಪ್ರಪಂಚ

ಗಂಗಾವತಿ ಪ್ರಾಣೇಶ್
vveditoped@gmail.com

ವಯಸ್ಸಾದಂತೆಲ್ಲ ಹೆಚ್ಚು ಹೆಚ್ಚು ನೆನಪಾಗುವುದು ಬಾಲ್ಯದ ದಿನಗಳೇ. ಯೌವ್ವನದ ಹುಚ್ಚಾಟ ಗಳನ್ನು ನೆನಪಿಸಿಕೊಂಡು ನಗು ಬರುತ್ತದೆಯಾಗಲಿ, ಮನಸ್ಸಿಗೆ ಮುದ ಕೊಡುವುದು, ಹತ್ತು - ಹನ್ನೆರಡನೆಯ ವಯಸ್ಸಿನ ಘಟನೆಗಳು, ಆಗ ನಮ್ಮೊಡನಿದ್ದ, ನಮ್ಮ ಈಗಿನ ವಯಸ್ಸಿನ ಆ ಹಿರಿಯರ ಮಾತು, ವರ್ತನೆ, ಅವರ ತಲ್ಲಣಗಳು, ಅವರ ಶ್ರದ್ಧೆಗಳು, ಅವರ ಸಂತೃಪ್ತ ಜೀವನ, ಇಂಟರ್‌ನೆಟ್, ಕಂಪ್ಯೂಟರ್, ಟಿ.ವಿ ಗಳಿಲ್ಲದ ಆ ಕಾಲ ಓಹ್! ಎಷ್ಟು ನೆಮ್ಮದಿ ಇತ್ತು. ಶೆಟ್ಟರ ಮನೆಯಲ್ಲಿ ಮೊದಲ ಬಾರಿಗೆ ಕ್ಯಾಲ್ಕುಲೇಟರ್ ನೋಡಿದಾಗ, ಮೊದಲೇ ಲೆಕ್ಕದಲ್ಲಿ ವೀಕ್ ಇದ್ದ ನಾನು ಇಂಥದೊಂದನ್ನು ಎಂದು ಕೊಳ್ಳುತ್ತೇನೆಯೋ? ಎಂದು ಹಳಹಳಿಸಿದ್ದೆ. ನಾಲ್ಕಾಣೆ, ಎಂಟಾಣೆಗಳ ಕಾಲ ಅದು. ಮಣ್ಣಿನ ಕುಳಿಯೊಂದರಲ್ಲಿ ಐದು, ಹತ್ತು ಪೈಸೆ ಹಾಕುತ್ತಾ ವಾರಕ್ಕೋ, ಹದಿನೈದು ದಿನಕ್ಕೋ ಸಿನಿಮಾಗೆ, ಆಗಿನ ಆದರ್ಶ ಕೆಫೆಯ ಮಸಾಲ ದೋಸೆಗೆ ಅದರಿಂದ ಹಣ ತೆಗೆಯುತ್ತಿದ್ದೆ. ಕ್ಯಾಲ್ಕುಲೇಟರ್‌ಗೆ ಇಪ್ಪತ್ತೈದು ರುಪಾಯಿಯೆಂದು ಅದರ ಆಸೆಯನ್ನೇ ಬಿಟ್ಟಿದ್ದೆ. ಹದಿನೈದು ಪೈಸೆ ಪೋಸ್ಟ್ ಕಾರ್ಡ್ ಹಾಕಿ ಪರ ಊರಿನ ಬಂಧುಗಳ ಕ್ಷೇಮ, ಸಮಾಚಾರ ಒಂದು ವಾರ ಕಾಯುತ್ತಿದ್ದ ಆ ದಿನಗಳ ಸೊಗಸು ಏನುಕೊಟ್ಟರೆ, ಎಷ್ಟು ಕೊಟ್ಟರೆ ಸಿಕ್ಕೀತು ಹೇಳಬಲ್ಲವರೇ ಇಲ್ಲ. ನನ್ನ ತಂದೆ, ತಾಯಿ ಇಬ್ಬರದೂ ಗಂಗಾವತಿಯೇ ಜನ್ಮಸ್ಥಳ. ರಾಯರ ಮಠದ ಬಳಿ ತಾಯಿಯ ತವರು ಮನೆ ಇದ್ದರೆ, ಎರಡನೇ ಬೀದಿ ಹೇರೂರು ಓಣಿಯಲ್ಲಿ ತಂದೆಯ ತಂದೆ, ತಾಯಿ ಅಂದರೆ ನಮ್ಮ ತಾಯಿ ಅತ್ತೆ ಮನೆ, ತಂದೆಯ ತಂದೆ ಎಂದರೆ ನನ್ನ ಗಂಡಜ್ಜ ಹನುಮಂತಾಚಾರ್, ಅಜ್ಜಿ ಜೀವಮ್ಮ ಹೇರೂರು ಓಣಿಯಲ್ಲಿದ್ದರೆ, ತಾಯಿಯ ತಂದೆ ಅಂದರೆ ನನ್ನ ಹೆಣ್ಣಜ್ಜ ಶ್ಯಾಮರಾವ್ ಕುಲಕರ್ಣಿ ಅವರ ಮನೆ, ಅಜ್ಜಿ ಇರಲಿಲ್ಲ. ನಾನು ಹೆಚ್ಚು ಬೆಳೆದದ್ದೆ ಶ್ಯಾಮರಾವ್ ತಾತನ ಮನೆಯಲ್ಲಿ. ತಾತನಿಗೆ ಹೆಂಡತಿ ಇರಲಿಲ್ಲ, ಆದರೆ ಹೆಂಡತಿ ಅಕ್ಕ ಅಂಬಕ್ಕ ಎನ್ನುವ ಮಡಿ ಹೆಂಗಸು ತಾತನಿಗೆ, ಅಡಿಗೆ ಊಟಕ್ಕಾಗಿ, ತಂಗಿ, ತಂಗಿ ಗಂಡನ, ಆತನ ಮಕ್ಕಳ ಸೇವೆಯಲ್ಲಿಯೇ ಕಾಲ, ಆಯುಷ್ಯ ಕಳೆದಳು. ಸದಾ ಹಲ್ಲು ಕಡಿಯುತ್ತಾ, ಸಣ್ಣ ಸಣ್ಣದಕ್ಕೇ ರೇಗುತ್ತಿದ್ದಳು. ಎಲ್ಲರನ್ನು ಅಂಜಿಸಿಕೊಂಡು ಅಂಕೆಯಲ್ಲಿಟ್ಟುಕೊಂಡಿದ್ದಳು. ಗಂಡನ ಮುಖದ ಪರಿಚಯವೇ ಈಕೆಗೆ ಇರಲಿಲ್ಲ.

ತಾತ ಶ್ಯಾಮರಾಯನ ತಂಗಿ ಸಾವಿತ್ರವ್ವ ಎಂಬಾಕೆಯೂ ಆ ದಿನಗಳಲ್ಲಿ ತನ್ನ ಮಗನೊಂದಿಗೆ ತಾತನ ಮನೆಗೆ ರಜೆಗೆ ಬರುತ್ತಿದ್ದಳು. ಈಕೆಯೂ ಮಡಿ ಹೆಂಗಸು. ಆಗ ನಾನು ಅದೇ ಹತ್ತನೆಯ ಕ್ಲಾಸ್ ಪಾಸಾಗಿ, ಪಿ.ಯು.ಸಿ ಮೊದಲ ವರ್ಷದಲ್ಲಿದ್ದೆ. (ಪಿ.ಯು.ಸಿ ಎಂದರೆ ಪ್ಯಾಂಟ್ ಯೂಸರ್ಸ್ ಕಂಪನಿ ಎಂದೂ ಹೆಸರಿತ್ತು ಆಗ) ಹತ್ತನೆಯ ವರ್ಗದವರೆಗೂ ಪ್ಯಾಂಟ್ ಹಾಕುವಂತಿರಲಿಲ್ಲ. ಪ್ಯಾಂಟ್ ಹಾಕಿದವೆಂದರೆ ಕವಿತೆ ಬರೆಯುವ ಹುಚ್ಚೂ ಅಂಟಿಕೊಳ್ಳುತ್ತಿತ್ತು. ನಾನಂತೂ ಮೊದಲೇ ಕಾವ್ಯ, ಹಾಸ್ಯ, ಕಾದಂಬರಿ ಓದಿನ ಗೀಳಿನವನು ಕೇಳಬೇಕೇ? ಅಂತ್ಯ ಪ್ರಾಸದ ಕವನಗಳನ್ನೇ ಒಂದರ ಕೆಳಗೊಂದು ಬರೆದು ಕವನ ಮಾಡುತ್ತಿದ್ದೆ. ಅದರ ಮೊದಲ ಕೇಳುಗರೇ ತಾತ ಶ್ಯಾಮರಾವ್, ತಾತನ ತಂಗಿ ಸಾವಿತ್ರವ್ವ.

ಹುಡುಗನ ಹುಚ್ಚಾಟ ಎಂದು ಬೇಸರಿಸಿಕೊಳ್ಳದೇ ಅದೆಷ್ಟು ತನ್ಮಯರಾಗಿ ಕೇಳುತ್ತಿದ್ದರೆಂದರೆ, ಇಂದಿಗೂ ನನಗೆ ಯಾರಾದರೂ ನನ್ನ ಮುಂದೇನಾದರೂ ಓದುತ್ತಿದ್ದರೆಂದರೆ, ನಾನೂ ಹಾಗೆ ಕೇಳಬೇಕೆಂಬ ತನ್ಮೂಲಕ ಓದುವವರನ್ನು ಪ್ರೋತ್ಸಾಹಿಸಬೇಕೆಂಬ ಪಾಠ ಕಲಿತಿದ್ದೇ ಅವರನ್ನು ನೋಡಿ ಎನಿಸುತ್ತಿರುತ್ತದೆ. ತಾತನ ತಂಗಿ ಸಾವಿತ್ರವ್ವ ಬಲು ಸಮಾಧಾನಿ ಹೆಣ್ಣು ಮಗಳು, ಆಕೆಗೆ ಸಿಟ್ಟು ಬಂದಿದ್ದನ್ನು, ಬಿರುಸು, ಕಟು ಮಾತನಾಡಿದ್ದನ್ನು ನಾನು ಕಾಣಲೇ ಇಲ್ಲ. ಅಸ್ತಮಾ ಆಕೆಯನ್ನು ತುಂಬಾ ಪೀಡಿಸುತ್ತಿತ್ತು. ಅಪರಾತ್ರಿಗಳಲ್ಲಿ ಒಬ್ಬಳೇ ಎದ್ದು ಕೂತು ಭರ‍್ರರ‍್ರರ‍್ರ ಎನ್ನುವ ಪಂಪ್ ಸ್ಟೌವ್ ಹಚ್ಚಿಕೊಂಡು ಹಂಚಿನ ಮೇಲೆ ಬಟ್ಟೆ ಇಟ್ಟು ಎದೆಗೆ ಅದರ ಕಾವು ಕೊಟ್ಟುಕೊಳ್ಳುತ್ತಿದ್ದಳು. ಬೇಸಿಗೆಯಲ್ಲಿ ಸೆಖೆಗೆ ಅಸ್ತಮಾ ರೋಗಿಗಳಿಗೆ ಹೆಚ್ಚಿನ ಕಷ್ಟವಿರುತ್ತದೆ ಎಂದು ನನಗೆ ತಿಳಿದಿದ್ದೇ ಆಗ. ಆಕೆಯ ಒಬ್ಬ ಮಗ ನನ್ನ ತಮ್ಮನ ವಾರಿಗೆಯವ, ಚಿದಂಬರ ಎಂದು ಹೆಸರಿತ್ತು. ತಾವಿಬ್ಬರೂ ಅಣ್ಣನ ಮನೆಗೆ ಬಂದದ್ದು, ಬೇಸಿಗೆಯ ರಜೆಯ ತಿಂಗಳು ಕಳೆಯೋದು ತಮ್ಮ ಖರ್ಚು ಅಣ್ಣನ ಮೇಲೆ ಬೀಳುತ್ತದೆ ಎಂದು ಆಕೆ ಅದೆಷ್ಟು ಕಷ್ಟಪಟ್ಟು ಅಣ್ಣನ ಮನೆಯ ಕೆಲಸ ಮಾಡುತ್ತಿದ್ದಳೆಂದರೆ ಅಪರಾತ್ರಿಯಲ್ಲಿ ಆಕೆಯ ಅಸ್ತಮಾ ಉಬ್ಬಸ ಜಾಸ್ತಿ ಆಗುತ್ತಿದ್ದುದ್ದೇ ಆಕೆಯ ಹಗಲಿನ ಹೆಚ್ಚಿನ ಆಯಾಸದ ಕೆಲಸಗಳಿಂದ. ಹೀಗಾಗಿ ಆಕೆಗೆ ಕೈಲಾದ ಸಹಾಯ ಮಾಡುತ್ತಿದ್ದ ನನ್ನನ್ನು ಆಕೆ ತುಂಬಾ ಹರಸುತ್ತಿದ್ದಳು. ಅವೆಲ್ಲ ಹರಕೆಗಳೇ ನನ್ನ ಈಗಿನ ಏಳಿಗೆಗೆ ಪೂರಕವೇನೋ ಎನಿಸುತ್ತಿರುತ್ತದೆ.

ಈಗಿನ ಪೀಳಿಗೆಗೆ ಇಂಥ ಹಿರಿಯರ ಸೇವೆಯ ಹರಕೆಗಳೇ ಇಲ್ಲ. ಇಂದಿನ ಮಕ್ಕಳಿಗೆ ಮೊಬೈಲ್ ಬಿಟ್ಟರೆ ಬೇರೇನೋ ಹೊರಗಿದೆ ಎಂಬ ಸತ್ಯವೇ ತಿಳಿಯುತ್ತಿಲ್ಲ. ನನ್ನ ತಂದೆಯ ತಂದೆ ಗಂಡಜ್ಜ ಹನುಮಂತಾಚಾರ್ ಗೋಸೇವಾ ದುರಂಧರರು. ಹೆಸರಿಗೆ ಕುಲಕರ್ಣಿಕಿ ಮಾಡುತ್ತಿದ್ದರೂ, ಸದಾ ಮನೆಯಲ್ಲಿ ಕಟ್ಟಿದ್ದ ಆಕಳಿಗೆ ಮಾರ್ಕೆಟ್ ಎಲ್ಲ ಹುಡುಕಾಡಿ ಎಳೆ ಹಸಿರು ಹುಲ್ಲು ತಂದು ತಿನ್ನಿಸೋದು, ಅದರ ಕೊಟ್ಟಿಗೆಯನ್ನು ಶುಚಿಯಾಗಿಡುವುದರಲ್ಲಿ ಆತನಿಗೆ ಅದ್ಭುತ ಶ್ರದ್ಧೆ ಇತ್ತು. ಆಕಳು ಗರ್ಭಧರಿಸಿದರಂತೂ ಅದನ್ನು ಸ್ವಂತ ಮಗಳಂತೆ ನೋಡಿಕೊಳ್ಳುತ್ತಿದ್ದ. ರಾತ್ರಿಯೆಲ್ಲ ಎದ್ದು ಕೂತು ಅದರ ಆರೈಕೆ ಮಾಡುತ್ತಿದ್ದ, ಚಳಿಯಾಗಬಾರದೆಂದು ಕಂಬಳಿ ಹೊದಿಸುತ್ತಿದ್ದ, ಅದು ಪ್ರಸವಿಸುವ ದಿನ ಬಂದಾಗ ಎರಡೂ ಕೈಯ್ಯೊಡ್ಡಿ ಮರಿ ನೆಲಕ್ಕೆ ಬೀಳದಂತೆ ಕೈಯಲ್ಲೇ ಹಿಡಿಯುತ್ತಿದ್ದ. ಅದರ ಮೈಮೇಲೆ ನೊಣ, ಸೊಳ್ಳೆ ಕೂರಬಾರದೆಂದು ಹೊಗೆ ಹಾಕುತ್ತಿದ್ದ. ಹೋಗುತ್ತಾ, ಬರುತ್ತಾ ಅದರ ಮೇಲೆ ಕೈಯ್ಯಾಡಿಸುತ್ತಾ ಅದರ ಕಿವಿಯಲ್ಲಿ ಮುದ್ದು ಮುದ್ದಾಗಿ ಮಾತನಾಡಿಸುತ್ತಿದ್ದ. ಕರು ಹಾಲು ಕುಡಿದು ಬಿಟ್ಟ ಮೇಲೆ ಹಿಂಡಿಕೊಳ್ಳುತ್ತಿದ್ದ. ಕೆಚ್ಚಲಿಗೆ ಹತ್ತಿದ ತೊಣಚಿಗಳನ್ನು ಕಿತ್ತೆಸೆಯುತ್ತಿದ್ದ. ಒಂದೇ.. ಎರಡೇ.. ಅದು ತನ್ನ ಮಗಳೇನೋ ಎನ್ನುವಂತೆ ಕಾಯುತ್ತಿದ್ದ.. ಮುದ್ದಿಸುತ್ತಿದ್ದ.

ಒಮ್ಮೆ ಯಾರೋ ಹೊಸ ಮನೆ ಪ್ರವೇಶಕ್ಕೆ ಮೊದಲು ಆಕಳನ್ನು ನುಗ್ಗಿಸಬೇಕೆಂದು ಆಕಳನ್ನು ಒಯ್ದು ಅದು ಅಲ್ಲಿನ ನುಣುಪಾದ ಟೈಲ್ಸ್‌ಗಳ ಪಾವಟಿಗೆ ಏರುವಾಗ ಬಿದ್ದು ಕಾಲು ಮುರಿದುಕೊಂಡು ಬಿಟ್ಟಿತು, ತಾತ ಅಕ್ಷರಶಃ ಕಣ್ಣೀರು ಹಾಕಿಬಿಟ್ಟ. ಅಲ್ಲಿಂದ ಅದರ ಆರೈಕೆ ಇನ್ನೂ ಹೆಚ್ಚು ಮಾಡಿದ. ಸದಾ ಮುರಿದ ಕಾಲನ್ನೇ ನೇವರಿಸುತ್ತಾ ಕೂರುತ್ತಿದ್ದ.

ನಾವು ಮೊಮ್ಮಕ್ಕಳು ನಾನು, ನಮ್ಮಣ್ಣ ಹೋದರೆ 'ಪಲ್ಲಿ ಬಬ್ಬ, ಪ್ರಾಣೇಶ ಬಬ್ಬ' ಬಂದ್ರು, ಅಂತ ಮಕ್ಕಳ ಭಾಷೆಲೇ ನಮ್ಮನ್ನು ಮಾತನಾಡಿಸುತ್ತಿದ್ದ. ಆತನಿಗೆ ಎಲೆ ಅಡಿಕೆ ತಿನ್ನುವ ಅಭ್ಯಾಸ. ಆಗ ಹತ್ತುಪೈಸೆಗೊಂದು ಪಾನ್ 'ಸುಣ್ಣದ ಎಲಿ, ದೆಹಲಿ ಜರ್ದಾ' ಅಂತ ಹೇಳಿ ಕಟ್ಟಿಸಿಕೊಂಡು ಬರ್ರಿ' ಎಂದು ಇಪ್ಪತ್ತು ಪೈಸೆ ಕೊಡುತ್ತಿದ್ದ, ಹತ್ತು ಪೈಸೆ ಪಾನಿಗೆ, ಉಳಿದ ಹತ್ತು ಪೈಸೆಯಲ್ಲಿ ನಾನು, ನಮ್ಮಣ್ಣ ತಲಾ ಐದೈದು ಪೈಸೆ ತೆಗೆದುಕೊಳ್ಳುತ್ತಿದ್ದಿವಿ. ಮಧ್ಯಾಹ್ನ ತೆಳ್ಳನೆಯ ಧೋತರವೊಂದನ್ನು ಹೊದ್ದು ಒಂದರ್ಧ ಗಂಟೆ ಮಲಗುತ್ತಿದ್ದ. ಉಳಿದಂತೆ ಅತ್ಯಂತ ಕಷ್ಟ ಜೀವಿ, ಯಾವ ಊರನ್ನೂ ನೋಡಲಿಲ್ಲ, ಆತನ ಕಷ್ಟದ ಜೀವನ, ಗೋಸೇವೆಗಳು ಇಂದು ಆತನ ಮಕ್ಕಳನ್ನು, ಮೊಮ್ಮಕ್ಕಳಾದ ನಮ್ಮನ್ನು ಗೋಸೇವೆಯ ಪುಣ್ಯದ ಫಲವೆಂಬಂತೆ ಕಾಪಾಡುತ್ತಿವೆ. 'ಕಷ್ಟೇಫಲಿ' ಎಂಬ ಸಂಸ್ಕೃತ ಉಕ್ತಿ, 'ರಕ್ಷಂತಿ ಪುಣ್ಯ ಪುರಾ ಕೃತಾನಿ' ಅಂದರೆ ಹಿಂದೆ ಮಾಡಿದ ಪುಣ್ಯವೇ ನಮ್ಮನ್ನಿಂದು ಕಾಯುವುದು ಎಂಬ ಈ ಉಕ್ತಿಯಲ್ಲಿ ಹಿಂದೆ ಎಂಬುದಕ್ಕೆ ಬರೀ ಕಾಲ ಮಾತ್ರ ಗಣನೆಯಲ್ಲ, ಹಿಂದಿನ ಹಿರಿಯರೂ ಎಂದು ಅರ್ಥೈಸಿಕೊಳ್ಳಬೇಕಿದೆ. ನನ್ನ ತಂದೆ, ನನ್ನ ತಾಯಂದಿರು ಬಡತನಕ್ಕಿಂತಲೂ ಸ್ವಲ್ಪ ಮೇಲೆ, ಮಧ್ಯಮ ವರ್ಗಕ್ಕಿಂತಲೂ ಸ್ವಲ್ಪ ಕೆಳಗೆ ಬದುಕಿದವರು. ಒಮ್ಮೊಮ್ಮೆ ನನಗೆ ಕನ್ನಡ ಜನತೆ ಹೊದಿಸಿದ ಸನ್ಮಾನದ ಜರತಾರಿ, ರೇಷ್ಮೆಯ ಶಾಲುಗಳ ರಾಶಿ ನೋಡಿದಾಗ ತೆಳ್ಳನೆಯ ಧೋತರ ಹೊದ್ದು ಮಲಗುತ್ತಿದ್ದ ತಾತಂದಿರು ನೆನಪಾಗುತ್ತಾರೆ. ಅಭಿಮಾನಿ ಸ್ನೇಹಿತರು ಕೊಡಿಸಿದ ಜಾಕೀಟು, ಪ್ಯಾಂಟ್, ಶರ್ಟ್, ರಾಮರಾಜ್ ಧೋತಿ, ಲುಂಗಿಗಳನ್ನು ಧರಿಸಿದಾಗ ಕಾಲರ್ ಬಳಿ, ಪ್ಯಾಂಟಿನ ತಳದಲ್ಲಿ ಪಿಸಿದುಹೋಗಿದ್ದ ಅಂಗಿ, ಪ್ಯಾಂಟು ಧರಿಸುತ್ತಿದ್ದ ನನ್ನಪ್ಪ ನೆನಪಾಗುತ್ತಾನೆ. ನನ್ನಪ್ಪ ಕರ್ಚೀಫ್‌ನ್ನು ಮುಖ, ಕೈಗಳನ್ನು ಒರೆಸಿಕೊಳ್ಳಲು ಪ್ಯಾಂಟಿನ ಜೇಬಿನಲ್ಲಿಟ್ಟುಕೊಳ್ಳದೇ ಪಿಸಿದು, ಹರಿದು ಹೋಗಿದ್ದ ಅಂಗಿ ಕಾಲರ್‌ನ್ನು ಮುಚ್ಚಲು ಕುತ್ತಿಗೆ ಸುತ್ತ ಕಟ್ಟಿಕೊಳ್ಳಲು ಬಳಸುತ್ತಿದ್ದುದೇ ನೆನಪಾಗುತ್ತದೆ.

ತರಹೇವಾರಿ ಪೆನ್ನುಗಳ ಗಿಫ್ಟ್ ತೆಗೆದುಕೊಳ್ಳುವಾಗ, ಸ್ಕೂಲ್ ಮೇಸ್ಟ್ರು ಆಗಿದ್ದ ನನ್ನಪ್ಪ ಭಾನುವಾರ ದಿವಸ ತನ್ನ ಮರ್ಚೆಂಟ್, ಇಂಕ್ ಪೆನ್ನಿನ ಎಲ್ಲ ಭಾಗಗಳನ್ನು ಬೇರ್ಪಡಿಸಿ ಬಿಸಿ ನೀರಿನಲ್ಲಿ ನೆನೆ ಇಟ್ಟು ರಾತ್ರಿ ಹೊತ್ತಿಗೆ ಅವನ್ನು ತೊಳೆದು ಒರೆಸಿ ಇಂಕು ತುಂಬಿ, ಮೂಡಿಸಿ ನೋಡಿ, ಕಚ್ಚಾ ಪೇಪರ್ ಮೇಲೆ ಪೆನ್ನು ಮೂಡುತ್ತದೆಯೋ ಇಲ್ಲವೋ ಎಂದು ನೋಡಲು ತನ್ನ ಸಹಿ ಮಾಡಿ, ಪರೀಕ್ಷಿಸಿ, ಅಂಗಿಯ ಜೇಬಿಗೆ ಸಿಕ್ಕಿಸಿಕೊಂಡು ಸೋಮವಾರದ ಬೆಳಗಿನ ಶಾಲೆಗೆ ರೆಡಿಯಾಗುತ್ತಿದ್ದುದೇ ನೆನಪಾಗುತ್ತದೆ.

ಹಿರಿಯರು ತಮಗಿದ್ದ ಮಾಮೂಲು ವಸ್ತುಗಳನ್ನು ಜೋಪಾನ ಮಾಡಿ ಕಾಯ್ದುಕೊಂಡು ಬಳಸಿದ ಪುಣ್ಯವೇ ನಮಗಿಂದು ಹೀಗೆ ಎಲ್ಲ ಕಡೆಯಿಂದಲೂ ಅನುಕೂಲಗಳು ಒದಗುತ್ತವೆಯಾಗಲಿ, ನನ್ನ ವೈಯಕ್ತಿಕ ಪ್ರತಿಭೆ, ಸಾಧನೆ, ಶ್ರಮಗಳಲ್ಲ ಎಂಬುದೇ ನನ್ನ ಪ್ರಾಮಾಣಿಕ ನಂಬಿಗೆಯಾಗಿದೆ. ಮಿತವ್ಯಯ, ಭಗವಂತ ನೀಡಿದ ವಸ್ತುಗಳ ಸದ್ಬಳಕೆ, ಇದ್ದುದರಲ್ಲಿಯೇ ದಾನ, ಮೃದು ಮಾತು, ಕೈಲಾದ ಪರೋಪಕಾರ, ಇನ್ನೊಬ್ಬರ ಕಷ್ಟಕ್ಕೆ ಮರುಗುವುದು, ಆತ್ಮ ಪ್ರಶಂಸೆಯೂ ಬೇಡ, ಪರನಿಂದೆಯನ್ನೂ ಮಾಡದೆ ಬದುಕುವ ರೀತಿಯಿದೆಯಲ್ಲ ಇದೇ ಮುಂದಿನ ನಮ್ಮ ಮಕ್ಕಳ ಸುಖಕ್ಕೆ ದಾರಿಯಾಗುತ್ತದಾಗಲಿ, ನಾವು ಗಳಿಸಿಟ್ಟ ಧನ, ಕನಕ, ವಸ್ತು ವಾಹನಗಳಲ್ಲ. ನಿನ್ನ ಕಾಲ ಚಪ್ಪಲಿಯನ್ನು ಬಿಸಿಲಲ್ಲಿ ತಿರುಗಲೇಬೇಕಾದ ಭಿಕ್ಷುಕನಿಗೆ ನೀನು ನೀಡಿದ್ದೇ ಆದರೆ, ಮುಂದಿನ ನಿನ್ನ ಸಂತಾನ, ವಂಶದಲ್ಲಿಯ ಮಕ್ಕಳು, ಮೊಮ್ಮಕ್ಕಳು ಆನೆಯ ಮೇಲೆ ಕೂರುವುದರಲ್ಲಿ, ಮೆರೆಯುವುದರಲ್ಲಿ ಸಂದೇಹವೇ ಇಲ್ಲ. ಇಂದು ನಮ್ಮ ಮುಂದೆ ವೈಭವೋಪೇತವಾಗಿ ಮೆರೆಯುತ್ತಿರುವವರ ವೈಭವದ ಗುಟ್ಟು ಅವರ ಹಿರಿಯರದೇ ಆಗಿರುತ್ತದೆ. ಇವರ ಅಕ್ರಮ, ಅನ್ಯಾಯ, ದುರಾಚಾರಗಳು ಮಿತಿಮೀರಿದ ದಿನ ಇವರು ಆನೆಯ ಮೇಲಲ್ಲ, ಚಪ್ಪಲಿಗೆ ಹೊಡೆಯುವ ಮೊಳೆಗಿಂತಲೂ ಕಡೆಯಾಗಿರುತ್ತಾರೆ.

ಎಲ್ಲ ವ್ಯಕ್ತಿ, ವಸ್ತುಗಳಿಗೂ ಇದೇ ಹಿನ್ನೆಲೆ. ಇದನ್ನೇ ಶಾಸ್ತ್ರಗಳು ನಮಗೆ ತಿಳಿಸಿಕೊಡುವುದು. ಅರಿತರೆ ಸ್ವರ್ಗ, ಮರೆತರೆ ನರಕ, ಮಿತಿಮೀರಿದರೆ ಮಾನಗೇಡಿತನ, ಈಗ ಎಲ್ಲೆಡೆ ನಡೆಯುತ್ತಿರುವುದು ಇದೇ ಅಲ್ಲವೇ..?